(ಅ) ಹಾಗಿದ್ದಲ್ಲಿ, ರಾಜ್ಯ ಸರ್ಕಾರದಿಂದ ಈ ಕೆಲಸ ಪ್ರಾರಂಭಿಸಲು ವಿಳಂಬವಾಗಲು ಕಾರಣಗಳೇನು.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮಿನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಮಲ್ಪೆ ಮಿನುಗಾರಿಕಾ ಬಂದರಿನ ಎರಡನೇ ಹಂತದ ಯೋಜನೆಗೆ ಈಗಾಗಲೇ ಕೇಂದ್ರ ಸರಕಾರದವರು ಮಂಜೂರಾತಿ ಮಾಡಿದ್ದಾರೆ. ಅದಕ್ಕೆ ರಾಜ್ಯ ಸರಕಾರದಿಂದ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬ ಬಗ್ಗೆ ಮಾನ್ಯ ಸಂಸತ್ ಸದಸ್ಯರೊಬ್ಬರಿಂದ ಮಲ್ಪೆಯ ಮಿನುಗಾರಿಕಾ ಸಂಘದವರಿಗೆ ಬಂದಿರತಕ್ಕಂಥ ಪತ್ರವನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಸಲ್ಲಸುತ್ತಿದ್ದೇನೆ. ಒಂದು ವೇಳೆ ಕೇಂದ್ರ ಸರಕಾರದವರು ಇದಕ್ಕೆ ಮುಂಜೂರಾತಿಯನ್ನು ನೀಡದೇ ಇದ್ದಲ್ಲಿ ರಾಜ್ಯ ಸರಕಾರ ಈ ಮಲ್ಪೆ ಬಂದರದ ಎರಡನೇ ಹಂತದ ಯೋಜನೆಗೆ ಮಂಜೂರಾತಿಯಾಗುವ ಹಾಗೆ ಯಾವ ಕಾರ್ಯಕ್ರಮವನ್ನು ಹಮ್ಮಿ ಕೊಂಡಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಕೇಂದ್ರ ಸರಕಾರದವರು ಈ ಒಂದು ಆರ್ಥಿಕ ಯೋಜನೆಯು ಯೋಗ್ಯವೇ ಎಂಬ ಬಗ್ಗೆ ಒಂದು ವರದಿಯನ್ನು ಒಪ್ಪಿಸಲು ಹೇಳಿದ್ದಾರೆ. ಆ ವರದಿಯನ್ನು ನಾವು ಒಪ್ಪಿಸಿದ್ದೇವೆ. ಅದರ ಮದ್ಯದಲ್ಲಿ ಮಲ್ಪೆ ಮಿನುಗಾರಿಕಾ ಬಂದರಿನ ಮಿನುಗಾರಿಕಾ ದೋಣಿಗಳ ತೀವ್ರ ಒತ್ತಡವನ್ನು ಪರಿಗಣಿಸಿ ರಾಜ್ಯ ಸರಕಾರದವರು 70.50 ಲಕ್ಷ ರೂಪಾಯಿಗಳ ವೆಚ್ಚದಲ್ಲ 215 ಕಿ.ಮಿ. ಉದ್ದದ ಜಟ್ಟಿ ನಿರ್ಮಾಣಕ್ಕೆ ಈಗಾಗಲೇ ಮಂಜೂರಾತಿಯನ್ನು ಕೊಟ್ಟು ಅದು 18-5-95 ರಿಂದ ಕಾರ್ಯರಂಭವಾಗಿದೆ.

Supply of power to the Farmers in the State

366 Sri B. Shivarmu (gandass) : Will the Deputy Chief Minister be pleased to State.

1. *What is the quantum of Electrical energy supplied to the I.P. Sets of Famers free of cost?*
2. *What is the quantum of electricl energy that is being supplied under lower rates with the help of subsidy?*
3. *what is the expenditure incurred by the Government on account of supplying this electricity free of cost and at lower rates ? (Years 1992-93, 1993-94 and 1994-95).*
4. *Is there any thought by the Government of stopping free and subsidised electricituy to formers totally or fixing up of a minimum rate ?*
   If it is so, what is the reason? and will it niot cause trouble to the farmers under the present System?
5. *Whether Government takes any action to supply continuous power supply for 8 IIrs. per day after fixing the rates.*

Sr. J.H. Patel (Deputy Chief minister). :

1. As the Board's Annual Accounts for the Year 1994-95 are not yet finalised, till now, the quantum of free electrical energy supplied to farmers are not available for the year 1994-95. During the year 1993-94, the total quantum of electrical energy supplied to farmers free of cost is assessed. as 6076 MU.

2. Free electricity is supplied to Irrigation pumpsets upto 10 Hp and these pumpsets from 99.6% of total I.P.Sets in the State, with the balance of 0.4% of above 10 HP I.P. Sets utilising negligible amount of electricity.

3. 1992-93 Rs. 267 Crores.

1993-94 Rs. 303.8 Crores.

Since, the Accounts for the quantums of Electrical Energy supplied free of cost to I.P. Sets during 1994-95 is yet to be finalised, the figures of revenue shortfall is not available.

4. yes.

As per the decision taken during the conference of power Minister held for the months of Se4ptembver 1991, April 1992 and January 1993, insyead of supplying free electricity to I.P. Sets, if a minimum charge of 50 paise per unit consumed is levied, Board would have got an increased ravenus of 267 Crores and 303.8 Crores during the Year 1992-93 and 1993-94 respectively.

This amount could have been utilbsed to set up now Sub-station and other infrastructual dovelopment programmed The joint logislation Committtee has also recommennded for fixing a tariff of Rs. 100 for H.P. Pumpsets.

5. Karnataka Electricity Board is trying its maximum efforts to supply good and improved electricity to the Irrigadtion pumpsets of the Ryots.

ಶ್ರೀ ಬಿ. ಶಿವರಾಂ : ಮಾನ್ಯ ಅಧ್ಯಕ್ಷರೆ, 1993-94ರಲ್ಲಿ ರೈತರಿಗೆ 6076 ದಶಲಕ್ಷ ಯೂನಿಟನ್ನು ಉಚಿತವಾಗಿ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಅದಕ್ಕೆ ತಗಲಿವ ಖರ್ಚು 3.6 ಕೋಟಿ ಎಂದೂ ತಿಳಿಸಿದ್ದಾರೆ. ಪ್ರಮುಖವಾಗಿ ನನಗೆ ಬೇಕಾಗಿರುವ ಉತ್ತರ, ಉಚಿತ ಮತ್ತು ಸಹಾಯಧನದ ವಿದ್ಯುತ್ ವ್ಯವಸ್ಥೆಯನ್ನು ರೈತರಿಗೆ ಪೂರ್ಣ ನಿಲ್ಲಿಸುವ ಅಥವಾ ಕನಿಷ್ಠ ದರವನ್ನು ವಿಧಿಸುವ ಆಲೋಚನೆ ಸರ್ಕಾರಕ್ಕಿದೆಯೇ ಎಂದು, ಅದಕ್ಕೆ 'ಹೌದು' ಎಂದಿದ್ದಾರೆ. ಇದಕ್ಕೆ ಕಾರಣ ಕೇಳಿದ್ದೇನೆ, ಕಾರಣ ಹೇಳಿದ್ದಾರೆ. 1993ರಲ್ಲಿ ನೆಡೆದ ಸಮೇಳನದಲ್ಲಿ ಒಂದು ಯೂನಿಟ್‌ಗೆ 50 ಪೈಸೆ ಫಿಕ್ಸ ಮಾಡಬೇಕೆಂದು ತೀರ್ಮಾನವಾಗಿದೆ ಎಂದು ಹೇಳಿದ್ದಾರೆ. ಮತ್ತೆ ಜಂಟಿ ಸದನ ಸಮಿತಿ ಕೂಡ ಒಂದು ಯೂನಿಟ್‌ಗೆ 3 ರೂಪಾಯಿನಂತೆ ವಾರ್ಷಿಕ ನಿಗದಿ ಮಾಡಬೇಕೆಂಬ ವಿಚಾರ ಹೇಳಲಾಗಿದೆ. ಇದರಿಂದ 303 ಕೋಟಿ ಉಳಿಸಿ, ಅದನ್ನು ಬೇರೆ ಅಭಿವೃದ್ಧಿಗಳಿಗೆ ಉಪಯೋಗಿಸಲು ಅನುಕೂಲವಾಗುತ್ತದೆಂಬುದು. ಅದಕ್ಕೆ ಮುಂದಕ್ಕೆ ನಾನು ಕೇಳಿದ್ದೇನೆ, ರೈತರಿಗೆ ಈಗಿನ ವ್ಯವಸ್ಥೆಯಲ್ಲಿ ತೊಂದರೆಯಾಗುವುದಿಲ್ಲವೇ ಎಂದಿದ್ದಕ್ಕೆ ಉತ್ತರ ನನಗೆ ಬಂದಿಲ್ಲ, ಏಕೆ ಉಚಿತವಾಗಿ ಅಥವಾ ಸಹಾಯಧನದ ಮೂಲಕ ರೈತರಿಗೆ ವಿದ್ಯುತ್ ಒದಗಿಸುವ ತೀರ್ಮಾನ ಹಿಂದಿನ ಸರ್ಕಾರ ಮಾಡಿತ್ತು? ಈಗಾಗಲೇ

ನಮಗೆ ಗೊತ್ತಿದೆ, ಒಬ್ಬ ರೈತ ದುಡ್ಡುಕೊಟ್ಟೋ ಸಾಲ ತೆಗೆದುಕೊಂಡೋ ಬಾವಿಗೆ 30-40 ಸಾವಿರ ಖರ್ಚು ಮಾಡಿದ ಕೂಡಲೆ ಸರ್ವೀಸ್ ತೆಗೆದುಕೊಳ್ಳುವದಕ್ಕೆ 2-3-4 ವರ್ಷ ಕಾಲ ಆಗುತ್ತಿದೆ. ಅಷ್ಟುಹೊತ್ತಿಗೆ ಬಡ್ಡಿ ಬೆಳೆದಿರುತ್ತದೆ. ಈಗಾಗಲೇ ಸಚಿವರು ಮೊದಲನೆಯ ಉತ್ತರದಲ್ಲಿ ಹೇಳಿದ್ದಾರೆ, ನಮ್ಮ ಉತ್ಪಾದನೆ ಎಷ್ಟಿದೆ ಎಂದರೆ ಮೂರೂವರೆ ಸಾವಿರ ಮೆಗಾವ್ಯಾಟೆ ಎಂದು, ಬೇಕಾಗಿರೂವುದು 11 ಸಾವಿರ ಮೆಗಾವ್ಯಾಟೆಂದು ಹೇಳಿದ್ದಾರೆ. ಈರೀತಿ ವ್ಯವಸ್ಥೆ ಇರುವಾಗ ಮತ್ತು ಸರ್ವೀಸ್ ತೆಗೆದುಕೊಳ್ಳುವುದಕ್ಕೆ ರೈತನಿಗೆ ಸಮಸ್ಯೆ ಇರುವಾಗ ಸಾಲ ತೆಗೆದುಕೊಂಡರೆ ಬಡ್ಡಿ ಕಟ್ಟುವುದೇ ಕಷ್ಟ ಎಂಬ ಪರಿಸ್ಥಿತಿಯಲ್ಲಿ ನಾವು ಈ ವ್ಯವಸ್ಥೆ ತಂದರೆ ಕನಿಷ್ಠ 3 ರೂಪಾಯಿ ವಾರ್ಷಿಕ, ಅಥವಾ 50 ಪೈಸೆ ಯೂನಿಟ್‌ಗೆ ಎಂದರೆ ಆ ರೈತನಿಗೆ ತೊಂದರೆಯಾಗುವುದಿಲ್ಲವೇ ಎಂಬುದು ನಮ್ಮ ಮೂಲಭೂತವಾದ ಪ್ರಶ್ನೆ. ಅದಕ್ಕೋಸ್ಕರ ವಾರ್ಷಿಕ 300 ಕೋಟಿ ತಗುಲುವುದನ್ನು ಸರ್ಕಾರ ತುಂಬಲಿಕ್ಕೆ ಚಿಂತೆ ಮಾಡುವುದು ಬೇಡವೇ? ಈ ಪ್ರಶ್ನೆಯ ಜೊತೆಗೆ ಇನ್ನೊಂದು ಪ್ರಶ್ನೆಯಲ್ಲಿ ಏನು 8 ಗಂಟೆಗಳ ಕಾಲ ವಿದ್ಯುತ್ತನ್ನು ಸಮರ್ಪಕವಾಗಿ ಒದಗಿಸುತ್ತೀರೋ ಎಂಬುದು. ಅದಕ್ಕೆ ಗಮನಿಸುತ್ತೇವೆ ಎಂದಿದ್ದೀರಿ. ಆದ್ದರಿಂದ ನಾವು ಈ ವ್ಯವಸ್ಥೆಯಲ್ಲಿ ವಿದ್ಯುತನ್ನು ಉಚಿತವಾಗಿ ಕೊಡುತ್ತೀರಾ ಇಲ್ಲವೇ? ಇಲ್ಲದಿದ್ದರೆ ಯಾವಾಗಿನಿಂದ ದರ ಫಿಕ್ಸ್ ಮಾಡುತ್ತಿರಿ?

ಶ್ರೀ ಗುರುಪಾದಪ್ಪ ನಾಗಮೂರಪಲ್ಲಿ : ಅಧ್ಯಕ್ಷರೇ, ಉತ್ತರ 'ಇ' ದಲ್ಲಿ ಮತ್ತು ಉತ್ತರ 'ಅ' ಮತ್ತು 'ಇ'ಗೆ ಸಮಾನ್ಯವಾಗಿಇದೆ. ಅದರಲ್ಲಿ 'ಇ'ದಲ್ಲಿ 2067, 303.08 ಕೋಟಿ ರೂಪಾಯಿಗಳು ವಸೂಲಾಗಿದ್ದರೆ ಬೇರೆ ಯಾವುದಾದರೂ ಅಭಿವೈದ್ಧಿ ಮಾಡಬಹುದಾಗಿತ್ತು ಬೇರೆ ಏನಾದರೂ ಹೊಸ ಪ್ರಯೋಗ ಮಾಡಬಹುದಿತ್ತು ಎಂಬ ಉತ್ತರ ಇದೆ. ಸರಿ, ಇದನ್ನು ಏಕೆ ಮಾಡಲಿಲ್ಲ? ಇದರ ಕಾರಣವೇನು? ಇದು ಯಾರ ಜವಾಬ್ದಾರಿ? ಒಟ್ಟು ಇದು 570.08ಕೋಟಿ ಆಗುತ್ತದ್. ಇದು ಆಗದಿರುವುದಕ್ಕೆ ಯಾವ ಸರ್ಕಾರ ಹೊಣೆ,? ಏನು ಕಾರಣ? ಇನ್ನೊ ಒಂದು, 1994-95ರದು ಲಭ್ಯವಿಲ್ಲ ಎಂದು ಹೇಳುತ್ತಾರೆ, ಅಂದರೆ ಯಾವಾಗ ಲಭ್ಯವಾಗಬಹುದು, ಅದ್ದರಿಂದ ಎಷ್ಟು ದುಡ್ಡು ಬರಬಹುದು? ಅಮೇಲೆ ರೈತರಿಗೆ ಒಳ್ಳೆಯ ವಿದ್ಯುತನ್ನು ಅಥವಾ ಸಬ್ಸಿಡಿ ದರದಲ್ಲಿ ಕೊಡುತ್ತೀರಾ ಎಂದು 'ಉ'ದಲ್ಲಿ ಕೇಳಿದ್ದೇನೆ.

· ದರ ನಿಗದಿಪಡಿಸಲು ನಂತರ ಪಂಪ್‌ಸೆಟ್‌ಗಳಿಗೆ ದಿನಕ್ಕೆ ಕನಿಷ್ಠ 8 ಗಂಟೆಕಾಲ ತಾವು ಸರಬರಾಜು ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಬಹಳ ಚೆನ್ನಾಗಿ ಉತ್ತರ ಹೇಳಿದ್ದಾರೆ. ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ

ಒಳ್ಳೆಯ ಗುಣಮಟ್ಟದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಎಂದು. ಒಳ್ಳಯ ದು ಎಂದರೆ ಯಾವುದು? ಅಂದರೆ 8 ಗಂಟೆಯೋ ಅಥವಾ 4 ಗಂಟೆಯೋ, ಇದು ನನುಗೆ ಅರ್ಥವಾಗೆಲ್ಲ. ಒಳ್ಳಯದು ಅಂದರೆ ಏನಾದರೂ ನಿರ್ದಿಷ್ಟವಾದ ಜವಾಬ್ದಾ ಬೇಕಲ್ಲ. ಅದು ಒಂದು ತಾವು ಉತ್ತರ ಹೇಳಬೇಕು ಆಮೇಲೆ8Ë6Ë85ರಲ್ಲಿ ಪ್ರಜಾವಾಣಿಯಲ್ಲಿ ಬಂದಿದೆ ದಿಹಲಿಯಿಂದ, ಕೃಷಿ ಪಂಪ್‌ಸೆಟ್‌ವಿದ್ಯುತ್‌ಗೆ ಕನಿಷ್ಠ ದರ ಕೇಂದ್ರಸೂಚನೆ ಎಂದು ಹೇಳಲಾಗಿದೆ, ಅದರಲ್ಲಿ ಇಂಧನ ಸಮಿತಿ ಕೂಡ ವರದಿ ಕೊಟ್ಟಿದೆ, ಆಮೇಲೆ ಮನಮೋಹನಸಿಂಗರವರೂ ಹೇಳಿದ್ದಾರ, ನಮ್ಮ ಮುಖ್ಯಮಂತ್ರಿಗಳೂ ಕೂಡ ನೋಡೋಣ, ಏನಾದರೂ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಯಾವಾಗ ಮಾಡುತ್ತೀರಿಯ? ನಿರ್ದಿಷ್ಟವಾದ ಉತ್ತರ ಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಜೆ.ಎಚ್. ಪಟೇಲ್: ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಎಷ್ಟು ಗಹನವೋ ಅಷ್ಟೇ ನಿರ್ದಿಷ್ಟವಾದ ಉತ್ತರವೂ ಅವಶ್ಯಕತೆ ಇದೆ. ಮಾನ್ಯ ಶಿವರಾಮು ಅವರು ಕೇಳಿರುವುದು ರೈತರಿಗೆ ಪ್ರತಿವರ್ಷ ವಿದ್ಯುತ್ ಕೊಡುವಾಗ ಎಷ್ಟು ರೂಪಾಯಿ ಮೊತ್ತದ ವಿದ್ಯುತ್‌ಕೊಡುತ್ತೀರಿ ಎನ್ನುವುದು. ಅದಕ್ಕೊಂದು ಆಧಾರ ಬೇಕಲ್ಲ? ಮೂರು

ವರ್ಷ ಹಿಂದೆ ಪವರ್ ಮಿನಿಸ್ಟರ್ಸ್ ಸಮ್ಮೇಳನ ಇದ್ದಾಗ ನಾವು ಅಂದಾಜು ಮಾಡಿದ್ದೆವು. ಒಟ್ಟು ನಮ್ಮ ರಾಜ್ಯದಲ್ಲಿ 18 ಸಾವಿರ ಮಿಲಿಯನ್‌ಯೂನಿಟ್ ರೈತರಿಗೆ ಹೋಗುತ್ತದೆ. ಅಂದರೆ ಆಲಮೋಸ್ಟ 33 ಪರ್ಸೆಂಟ್. ಇದನ್ನು 10 ಹಾರ್ಸಪವರ್‌ನ ಆಧಾರದ ಮೇಲೆ ಎಲ್ಲಾ ಫ್ರೀಯಾಗಿ ಕೊಟ್ಟಿದ್ದೇವೆ. ಅದರ ಲೆಕ್ಕ 50 ಪೈಸೆ ಆಧಾರದ ಮೇಲೆ 6 ಸಾವಿರ ಮಿಲಿಯನ್‌ಯೂನಿಟ್‌ಗೆ ನಾವು ಕೊಡುತ್ತಿರುವುದರಿಂದ 303 ಕೋಟಿ ಆಗುತ್ತದೆ ಎಂದು ಕೇಂದ್ರ ಮತ್ತು ರಾಜ್ಯಸರ್ಕಾರಿ ಎರಡೂ ಸೇರಿ ಹಾಕಿರುವುದು.

1992-93ರಲ್ಲಿ ಕೃಷಿಗಾಗಿ ಉಪಯೋಗಿಸಿದ ವಿದ್ಯುತ್‌ನ ಕ್ವಾಂಟಂ ಏನಿದೆ ಅದರ ಆಧಾರದ ಮೇಲೆ 267 ಕೋಟ, 1993-94ರಲ್ಲಿ ಅದೇ ಆಧಾರದ ಮೇಲೆ 303 ಕೋಟಿ, ಇದು ಅಂದಾಜು, ಕೊಟ್ಟಿದೆ ಎಂದಲ್ಲ. ಗುರುಪಾದಪ್ಪನವರು ಸರಿಯಾಗಿ ಓದಿಕೊಳ್ಳಬೇಕು. 50 ಪೈಸೆ ಮಿನಿಮಂ ಚಾರ್ಜ್ ಮಾಡಿದರೆ ಇಷ್ಟು ದುಡ್ಡು ಬರುತ್ತಿತ್ತು ಎಂದು. ಆದರೆ ವಾಸ್ತವಿಕವಾಗಿ—600 ಕೋಟಿ ರೂಪಾಯಿ ವಿದ್ಯುತ್‌ಆಗುತ್ತದೆ. ಇದೇ ಸದನದ ನಾಗರಾಜ್‌ಕಮಿಟಿ ಶಿಫಾರಸ್ ಮಾಡಿರುವ ಪ್ರಕಾರ ಒಂದು ಅಶ್ವಶಕ್ತಿಗೆ ಕನಿಷ್ಠ 100 ರೂಪಾಯಿ ಮಾಡಿದರೆ 45 ಕೋಟಿ ಸಂಗ್ರಹವಾಗುತ್ತದೆ. Actually, power that is being given to the farmers is of the value of Rs.600 crores. ಅದಕ್ಕೆ ಕೆ.ಇ.ಬಿ.ನವರು ನಾಗರಾಜ್‌ಕಮಿಟಿ ಶಿಫಾರಸಿನ ಮೇಲೆ ಏನು ಹೇಳಿದರು ಎಂದರೆ ಒಂದು ಅಶ್ವಶಕ್ತಿಗೆ 300 ರೂಪಾಯಿ ಮಾಡಿದರೂ 150 ಕೋಟಿ ಆಗುತ್ತದೆ. ಆದ್ದರಿಂದ 300 ರೂಪಾಯಿ ಮಾಡುವುದು ಸರಿ ಎಂದು ಅವರು ರೆಕಮೆಂಡ್ ಮಾಡಿದ್ದು ಇದೇ ಸದನದ ಸಮಿತಿ ನಾಗರಾಜ್ ಸಮಿತಿ 100 ರೂಪಾಯಿ ಹಾಕಿ ಅಶ್ವಶಕ್ತಿಗೆ ಎಂದರು, ಕೆ.ಇ.ಬಿ.ಯವರು ಕೇಳಿಕೊಂಡರು 300 ಹಾಕಿ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ, ನಾಯಕರೇ,

ಶ್ರೀ ಜೆ.ಎಚ್.ಪಟೇಲ್: ಮಾನ್ಯ ವಿರೋಧಪಕ್ಷದ ನಾಯಕರೇ ನಾವು ಸಮ್ಮತಿ ಕೊಡುವುದಾದರೆ ಈ ವಿಷಯವನ್ನೆ ಚರ್ಚೆ ಮಾಡಲು 1 ಗಂಟೆ ಕಾಲ ಏಕೆ ತೆಗೆದುಕೊಳ್ಳಬಾರದು? ಪ್ರಮುಖವಾದುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನನ್ನದೇನು, ಅಂದರೆ, ಇವತ್ತು ನಾವು ರೈತರಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ. ಅದರಿಂದ ಸರ್ಕಾರದ ಬೊಕ್ಕಸದ ಮೇಲೆ ದುಷ್ಪರಿಣಾಮವಾಗುತ್ತದೆ. ಆದ್ದರಿಂದ ಒಂದು ದರ ನಿಗದಿ ಮಾಡಬೇಕಂಬುದರ ಚರ್ಚೆಗೆ ಉತ್ತರ ಕೇಡುತ್ತಿದ್ದೀರಿ. ನಾನು ಒಂದು ಸಂಗತಿ ತಮ್ಮ ಗಮನಕ್ಕೆ ತರಬಯಸುತ್ತೇನೆ, ಬೇಕಾದರೆ ಒಂದು ಗಂಟೆ ಕಾಲ ಇದನ್ನು ಚರ್ಚೆ ಮಾಡೋಣ. ಇವತ್ತು ಯಾವ ರೈತನಿಗೆ ಉಚಿತವಾಗಿ ವಿದ್ಯುತ್ ಕೊಡುತ್ತಿದ್ದೇವೆ. ಇದೇ ಕಾರಣಕ್ಕಾಗಿ ದೊಡ್ಡ ಕ್ಯೂರ್ಚಾನೆ

ಮಾಲೀಕರಿಗೆ ಹೆಚ್ಚು ವಿದ್ಯುತ್‌ದರ ಹಾಕಿ ಅದನ್ನು ಕಾಂಪನ್‌ಸೇಟ್ ಮಾಡುವ ಪ್ರಯತ್ನ ನಾವು ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಈಗಾಗಲೇ ರೈತನ ಪಂಪಸೆಟ್‌ಗಳಿಗೆ ದಿವಸದಲ್ಲಿ ಒಂದು ಗಂಟೆ ವಿದ್ಯುತ್ತಿಲ್ಲ ನಿಮ್ಮ ಅಧಿಕಾರಗಳು ಪುಕ್ಕಟೆ ಕೊಡುತ್ತಿದ್ದೇವೆ ಅದಕ್ಕಾಗಿ ಆ ಕಡೆ ಏಕೆ ಗಮನ ಕೊದಬೇಕೆಂದು, ಈಗಾಗಲೇ ರೈತ ನೆಲಸಮ ಆಗಿದ್ದಾನೆ. ಮೊದಲು ಸರಿಯಾದ ವಿದ್ಯುತ್ ಸರಬರಾಜು ಮಾಡಿ ಅವನು ಒಳ್ಳೆಯ ಬೆಳೆ ತೆಗೆಯಲು ಅವಕಾಶ ಮಾಡಿಕೊಟ್ಟು ಆಮೇಲೆ ಇದರ ಬಗ್ಗೆ ಚರ್ಚೆ ಮಾಡಲು ಮುಂದೆ ಹೋಗಬೇಕೇ ಹೋರತು ಬರದಿಂದ ಜನ ಸಾಯುತ್ತಿದ್ದಾರೆ.

ಶ್ರೀ ಜೆ.ಹೆಚ್.ಪಟೇಲ್ : ಈ ವಿಷಯದಲ್ಲಿ ನಮ್ಮ ಸರ್ಕಾರದ ನಿಲುವನ್ನು ನಾನು ಮೊದಲನೆ ದಿವಸವೇ ಹೇಳಿದೆ. ರೈತರಿಗೆ ನಾವು ಪುಕ್ಕಟೆಯಾಗಿ ವಿದ್ಯುತ್ ಕೊಡಿತ್ತೇವೆಂದು ಅವರೇನೂ ಸಂತೋಷವಾಗಿಲ್ಲ, ಅವರು ದುಡ್ಡು ಕೊಡಲು ತಯಾರಿದ್ದಾರೆ, ಅವರ ಮೋಟಾರ್‌ಗಳು ಬರ್ನ ಆಗದಿದ್ದರೆ, ಅವರ ಪಂಪ್‌ಸೆಟ್ ಹಾಳಗದಿದ್ದರೆ. ಮೂರ್ನಾಲ್ಕು ಸಾವಿರ ರೂಪಾಯಿಗಳನ್ನು ಸ್ವತಃ ನಾನೇ ದಂಡ ತೆರುತ್ತಿದ್ದೇನೆ. ಆದ್ದರಿಂದ ಯಾವ ರೈತರೂ ಇವತ್ತು ವಿದ್ಯುತ್ತನ್ನು ಪುಗಸಟ್ಟೆ ಕೊಡಿ ಎಂದು ಕೇಳುವುದಿಲ್ಲ.

ಆದರೆ ಕೊಡುವ ವಿದ್ಯುಚ್ಛಕ್ತಿಯನ್ನು quality power constitently ಚೆನ್ನಾಗಿ ಇರಬೇಕು. 8 ಗಂಟೆ ಇಲ್ಲವೇ 6 ಗಂಟೆ ಕೊಡಿ. ನಾವು ಟ್ಯಾರಿಫ್‌ಹಾಕಲೇಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀವಾಟಾಳ್‌ನಾಗರಾಜ್: ವಿದ್ಯುಚ್ಛಕ್ತಿ ದರ ಹಾಕಬಾರದೆಂದು ಯಾವ ರೈತರು ಹೇಳಿದ್ದಾರೆ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್: ಇದರೊಳಗೆ ಯಾವ ಅಧಿಕಾರಿಗಳಿಗಾಗಲೀ, ಪುಕ್ಕಟೆಯಾಗಿ ವಿಕದ್ಯುತ್ತನ್ನು ಕೊಡುವುದು ವೈಜ್ಞಾನಿಕವೂ ಅಲ್ಲ, ಸಾಧುವು ಅಲ್ಲ.

ಶ್ರೀ ವಾಟಾಳ್ ನಾಗರಾಜ್: ಅದು ಸರಕಾರದ ನಿರ್ಧಾರ ಯಾವ ರೈತರು ನಮ್ಮ ಮೇಲೆ ತೆರಿಗೆ ಹಾಕಬೇಡಿ ಎಂದು ಹೇಳಿದ್ದಾರೆ. ಅವರೇ ಹೇಳಿಕೊಳ್ಳುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಚಾಮರಾಜನಗರದಲ್ಲಿ ರೈತರು ನಮಗೆ ಗೊತ್ತಿರುವವರು ಅದನ್ನೇ ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್: ಚಾಮರಾಜನಗರ ಆಗಿರಬಹುದು, ಶಿಕಾರಿಪುರ ಆಗಿರಬಹುದು, ಇನ್ನೊಂದು ಆಗಿರಬಹುದು. ಆ ಪ್ರಶ್ನ ಬಗ್ಗೆ ಮಾತನಾಡುತ್ತಿಲ್ಲ. ತಾವು ಹೇಳಿ ಯಾವ ರೈತರು ಹೇಳಿದ್ದಾರೆ ಎಂದು.

ಅಧ್ಯಷರು : ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಮುಂದಾಗಿದ್ದಾರೆ. ಇನ್ನೂ ಅನೇಕ ವಿಷಯಗಳು ಇದ್ದಾವೆ ಎಲ್ಲಾ ವಿಷಯವನ್ನು ಕೂಲಂಕಷವಾಗಿ ಚರ್ಚೆ ಮಾಡಲಿಕ್ಕೆ ಸಮಯವನ್ನು ನಿಗದಿ ಮಾಡಿ ಚರ್ಚೆ ಮಾಡೋಣ. ಅರ್ಧಂಬರ್ಧ ಮಾತನಾಡುವ ಬದಲು ನಿಮ್ಮ ಪ್ರಶ್ನೆಗಳಿಗೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಪುಕ್ಕಟೆಯಾಗಿ ರೈತರು

ಅಧ್ಯಕ್ಷರು :ಮಾನ್ಯ ಗುರುಪಾದಪ್ಪನವರೇ, ನಿಮ್ಮ ಪ್ರಶ್ನೆಗಳಿಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇರೆ ರಾಜ್ಯದವರು ರೈತರ ಪರವಾಗಿ ಇದ್ದಾರೆ. ಕೇರಳ ರಾಜ್ಯದವರು ರೈತರಿಗೆ ಐ.ಪಿ.ಸೆಟ್‌ಗೆ ಕೊಡುವ ವಿದ್ಯುತ್‌ದರವನ್ನು ಕ್ಯಾನ್ಸಲ್‌ಮಾಡಿ ಫ್ರೀಯಾಗಿ ಕೊಡುವ ತೀರ್ಮಾನ ಮಾಡುವಂತಹ ಕಾಲದಲ್ಲಿ ಇವರು ರೈತರ ಪರ ಎಂದು ಹೇಳುವ ಸರ್ಕಾರ ವಿದ್ಯುತ್ ದರವನ್ನು ಏರಿಸುವ ಬಗ್ಗೆ ಪುನರ್‌ಪರಿಶೀಲನೆ ಮಾಡೋಣ,ಮೊದಲು ಒಳ್ಳೆಯ ರೀತಿಯಲ್ಲಿ ವಿದ್ಯುತ್‌ಸರಬರಾಜು ಮಾಡಿ ನಂತರ ವಿಚಾರ ಮಾಡೋಣ. ದಯಮಾಡಿ ಈಗ ಅದನ್ನು ಮಾಡಬೇಡಿ.

ಅಧ್ಯಕ್ಷರು : ಈ ಎಲ್ಲಾ ವಿಚಾರವನ್ನು ಮಾನ್ಯ ಗುರುಪಾದಪ್ಪವರು ಪ್ರಸ್ತಾಪ ಮಾಡಿದ್ದು, ತಾವು ಕೇಳುತ್ತಾ ಇರುವುದು ಮತ್ತು ಇನ್ನೂ ಅನೇಕ ಸದಸ್ಯರು

ಹಲವಾರು ವಿಚಾರಗಳನ್ನು ಪ್ರಸ್ತಾಪಿಸಬೇಂದಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಸೇರಿಸಿ ಮತ್ತೊಂದು ದಿವಸ ವಿಸ್ತೃತವಾಗಿ ಚರ್ಚೆಗೆ ತೆಗೆದುಕೊಳ್ಳೋಣ ದಯಮಾಡಿ ಸಹಕರಿಸಿ.

ಶ್ರೀ ಬಿ. ಶಿವರಾಮು : ಮಾನ್ಯ ಮಂತ್ರಿಗಳು ಪೂರ್ಣ ಉತ್ತರವನ್ನು ಕೊಡಲಿ. ಸರಕಾರದ ತೀರ್ಮಾನ ಇದೆ ಎಂದು ಹೇಳಿದರು. ಪೂರ್ಣ ಉತ್ತರ ಕೊಡಲಿ

ಅಧ್ಯಕ್ಷರು : ಇದು ನಿಮ್ಮೊಬ್ಬರಿಗೇ ಸಿಮಿತವಾದಪದಲ್ಲ, ಇನ್ನೂ ಅನೇಕ ಜನ ಸದಸ್ಯರು ಪಾಲ್ಗೊಳ್ಳುತ್ತಾರೆ. ತಾವು ಕುಳಿತುಕೊಳ್ಳಿ. ನಿಮ್ಮ ಮಾತೃಭಾಷೆ ಕನ್ನಡ ಅಲ್ಲವೇ.

ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ನೇಮಕಾತಿ.

121 - ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶು ಚಿಕಿತ್ಸಾಲಯ ಕೇಂದ್ರಗಳೆಷ್ಟು;

ಆ) ಆ ಪೈಕಿ ಕೆಲವೊಂದು ಪಶು ಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳಿಲ್ಲೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಆಗಿದ್ದಲ್ಲಿ ವೈದ್ಯಾಧಿಕಾರುಗಳ ನೇಮಕಾತಿ ಮಾಡಲು ಸರ್ಕಾರದವರು ಕೈಗೋಳ್ಳಲಾಗುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೆಗೌಡ (ಪಶುಸಂಗೋಪನಾ ರಾಜ್ಯ ಸಚಿವರು)

ಅ) 3174

ಆ) ಬಂದಿದೆ

ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಕೊಟ್ಟಿರತಕ್ಕಂತಹ ಉತ್ತರ ನೋಡಿದರೆ ಮಾನ್ಯ ವಾಟಾಳ್ ನಾಗರಾಜ್‌ರವರ ಉತ್ತರ ಆಗಿದೆ. ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಸಹ ಹಾಕಿದ್ದಾರೆ. ಆದರೆ ಈ ಪ್ರಶ್ನೆಗೆ ಉತ್ತರ ಸರಿಯಾಗಿದೆಯೇ ಇಲ್ಲವೇ ಎಂದು ನೋಡಿಲ್ಲ. ವೈದ್ಯಾಧಿಕಾರಿಗಳು ಇಲ್ಲದೇ ಇರುವ ಪಶುಚಿಕಿತ್ಸಾ ಕೇಂದ್ರಗಳು ಎಷ್ಟು? ಅವುಗಳ ನೇಮಕಾತಿಗೆ ಸರಕಾರದವರು ಕ್ರಮವೇನು ತೆಗೆದುಕೊಳ್ಳುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆಂದು ಉತ್ತರ ನೀಡಿದ್ದಾರೆ. ಅದನ್ನು ಕೇಳುವುದಕ್ಕೆ ನಾವು ಇಲ್ಲಿ ಪ್ರಶ್ನೆ ಕೇಳಬೇಕೇ? ಉತ್ತರಕ್ಕೆ ಸಹಿ ಹಾಕುವ ಮೊದಲು ಓದಿ ನೋಡಿ ಸಹಿ ಹಾಕಬೇಕು. ಇಲ್ಲದಿದ್ದರೆ ಇಂತಹ ಪರಿಸ್ಥಿತಿ ಬರುತ್ತದೆ. ಹುದ್ದೆ ಮಂಜೂರಾದಂತಹ ಪಶು ಚಿಕಿತ್ಸಾ ಕೇಂದ್ರಗಳು ಎಷ್ಟು? ಕೊರತೆ ಇರುವಂತಹ ಪಶು ಚಿಕಿತ್ಸಾ ಕೇಂದ್ರಗಳು ಎಷ್ಟು? ಈ ಹುದ್ದೆಗಳನ್ನು ಎಂದು ಮಂಜೂರು ಮಾಡುತ್ತೀರಿ? ಕೊರತೆಯನ್ನು ಎಂದು ತುಂಬುತ್ತೀರಿ.

ಶ್ರೀ ಬಿ.ಎನ್. ಬಚ್ಚೇಗೌಡ : ರಾಜ್ಯದಲ್ಲಿ ಪಶುವೈದ್ಯಕೀಯ ಸಂಸ್ಥೆಗಳು 3174 ಇದೆ. ಅದರಲ್ಲಿ ಪಶು ಆಸ್ಪತ್ರೆಗಳು 240, ಪಶು ಚಿಕಿತ್ಸಾಲಯಗಳು, 697, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು 1622, ಸಂಚಾರ ಪಶು ಚಿಕಿತ್ಸಾಲಯಗಳು 173 ಮತ್ತು ಕೃತಕ ಗರ್ಭಧಾರಣಾ ಕೇಂದ್ರಗಳು 442. ಒಟ್ಟು 3174 ಪಶುವೈದ್ಯಕೀಯ ಸಂಸ್ಥೆಗಳು ಇಲ್ಲಿ ಕೆಲಸ ಮಾಡುತ್ತಿವೆ. ಎರಡನೇ ಪ್ರಶ್ನೆಯಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುಚಿಕಿತ್ಸಾ ಕೇಂದ್ರಗಳು ಎಷ್ಟು ಎಂದು ಕೇಳಿದ್ದಾರೆ, ಅದಕ್ಕೆ ಉತ್ತರ ಇದು. ಈ ಪೈಕಿ ಕೆಲವೊಂದು ಪಶುಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳಿಲ್ಲದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. 176 ಪಶು ವೈದ್ಯರು ಕಡಿಮೆ ಇದ್ದಾರೆ. 254 ಪಶು ವೈದ್ಯರು ಗುತ್ತಿಗೆ ಆಧಾರದ ಮೇಲೆ ಕಳೆದ ಎರಡು